# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

## (ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

**ಉದ್ಯೋಗ ನೇಮಕಾತಿ ಪ್ರಕಟಣೆ ಸಂಖ್ಯೆ: ಬೆವಿಕಂ/ಬಿಸಿ-50/2521/2014-15,**

**ದಿನಾಂಕ: 11.09.2014 - ಸಹಾಯಕ ಮಾರ್ಗದಾಳು ಐಟಿಐ**

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತವು "ಸಹಾಯಕ ಮಾರ್ಗದಾಳು" ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಸರ್ಕಾರದಿಂದ ಮನ್ನಣೆಯಾದ ಔದ್ಯೋಗಿಕ ತರಬೇತಿ ಸಂಸ್ಥೆ/ ಕೇಂದ್ರದಿಂದ "ಎಲೆಕ್ಟ್ರಿಷಿಯನ್/ ಎಲೆಕ್ಟ್ರಾನಿಕ್ಸ್/ ಎಲೆಕ್ಟ್ರಾನಿಕ್ ಮೆಕ್ಯಾನಿಕ್" ವೃತ್ತಿಯಲ್ಲಿ 18/24 ತಿಂಗಳಿನ ಪಠ್ಯ ಕ್ರಮದಲ್ಲಿ ಉತ್ತೀರ್ಣರಾಗಿರುವ ಐಟಿಐ ಪ್ರಮಾಣ ಪತ್ರ ಹೊಂದಿರುವ ಅರ್ಹ ಅಭ್ಯರ್ಥಿಗಳಿಂದ ನಿಗದಿತ ನಮೂನೆಯಲ್ಲಿ " ಆನ್‌ಲೈನ್" (ONLINE) ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ವೇತನ ಶ್ರೇಣಿ ರೂ7950-150-8100-190-9050-240-10250-300-11750-360-16790

ಅ) ಹುದ್ದೆಗಳ ವರ್ಗೀಕರಣ:

| ಕ್ರಮ ಸಂಖ್ಯೆ | ಸಮತಳ ಮೀಸಲಾತಿ | ಪ.ಜಾ | ಪ.ವ | ಸಾಮಾನ್ಯ | ಪ್ರ- I | ಪ್ರ- II A | ಪ್ರ- II B | ಪ್ರ- III A | ಪ್ರ- III B | ಒಟ್ಟು |
|---|---|---|---|---|---|---|---|---|---|---|
| 1 | ಸಾಮಾನ್ಯ | 12 | 3 | 39 | 4 | 11 | 4 | 4 | 5 | **82** |
| 2 | ಗ್ರಾಮೀಣ ಮೀಸಲಾತಿ | 5 | 1 | 17 | 1 | 5 | 1 | 1 | 2 | **33** |
| 3 | ಮಾಜಿ ಸೈನಿಕರು | 2 | 0 | 6 | 0 | 2 | 0 | 0 | 0 | **10** |
| 4 | ಕನ್ನಡ ಮಾಧ್ಯಮ ಅಭ್ಯರ್ಥಿ | 1 | 0 | 3 | 0 | 1 | 0 | 0 | 0 | **5** |
| 5 | ಯೋಜನೆ ನಿರಾಶ್ರಿತ ಅಭ್ಯರ್ಥಿ | 1 | 0 | 3 | 0 | 1 | 0 | 0 | 0 | **5** |
| **ಒಟ್ಟು** | | **21** | **4** | **68** | **5** | **20** | **5** | **5** | **7** | **135** |

**ಸೂಚನೆ:** ಸಹಾಯಕ ಮಾರ್ಗದಾಳು ಹುದ್ದೆಗೆ ಆಯ್ಕೆಯಾಗುವ ಅಭ್ಯರ್ಥಿಗಳನ್ನು ಬೆವಿಕಂ ಕಂಪನಿಯ ನೌಕರರೆಂದು ಪರಿಗಣಿಸಲಾಗುವುದು ಹಾಗು ಬೆವಿಕಂ ವ್ಯಾಪ್ತಿಯಲ್ಲಿನ ಯಾವುದೇ ಸ್ಥಳಕ್ಕೆ ನಿಯುಕ್ತಿಗೊಳಿಸಲಾಗುವುದು ಹಾಗೂ ಖಾಲಿ ಇರುವ ಸ್ಥಳಗಳಿಗೆ ಸಮಾಲೋಚನೆ ಮುಖಾಂತರ ಮೆರಿಟ್ ಆಧಾರದ ಮೇಲೆ ಸ್ಥಳ ನಿಯುಕ್ತಿಗೊಳಿಸಲಾಗುವುದು.

ಆ) ಅಗತ್ಯ ವಿದ್ಯಾರ್ಹತೆ:

**ಐ.ಟಿ.ಐ ಅಭ್ಯರ್ಥಿಗಳಿಗೆ–**

ಕರ್ನಾಟಕ ಸರ್ಕಾರದಿಂದ ಮನ್ನಣೆಯಾದ ಔದ್ಯೋಗಿಕ ತರಬೇತಿ ಸಂಸ್ಥೆ/ ಕೇಂದ್ರದಿಂದ "ಎಲೆಕ್ಟ್ರಿಷಿಯನ್/ ಎಲೆಕ್ಟ್ರಾನಿಕ್ಸ್/ ಎಲೆಕ್ಟ್ರಾನಿಕ್ ಮೆಕ್ಯಾನಿಕ್" ವೃತ್ತಿಯಲ್ಲಿ 18/24 ತಿಂಗಳಿನ ಪಠ್ಯ ಕ್ರಮದಲ್ಲಿ ಉತ್ತೀರ್ಣರಾಗಿರುವ ಐಟಿಐ ಪ್ರಮಾಣ ಪತ್ರ ಹೊಂದಿರತಕ್ಕದ್ದು.

**ಸೂಚನೆ:** ಮೇಲೆ ತಿಳಿಸಿರುವ ವಿಷಯಗಳನ್ನು ಹೊರತುಪಡಿಸಿ ಇತರೆ ವಿಷಯಗಳಲ್ಲಿ ವಿದಾರ್ಹತೆ ಹೊಂದಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಾರದು.

**ಇತರೆ ಅರ್ಹತೆಗಳು:**

i) ಕನ್ನಡದಲ್ಲಿ ಓದುವ ಮತ್ತು ಬರೆಯುವ ಜ್ಞಾನ ಹೊಂದಿರಬೇಕು.
ii) ತೃಪ್ತಿಕರ ನೇತ್ರ ದೃಷ್ಟಿಯನ್ನು ಹೊಂದಿರಬೇಕು.
iii) ತೃಪ್ತಿಕರ ದೇಹದಾರ್ಢ್ಯವನ್ನು ಹೊಂದಿರಬೇಕು ಮತ್ತು ಸಹನ ಶಕ್ತಿಯ ಪರೀಕ್ಷೆಯಲ್ಲಿ ಅರ್ಹತೆಗಳಿಸಬೇಕು.

ಇ) **ಅರ್ಹತೆ:**

ಅರ್ಹತಾದಾಯಕ ಪರೀಕ್ಷೆಗಳಲ್ಲಿ ಕೆಳಗೆ ತಿಳಿಸಿರುವಷ್ಟು ಕನಿಷ್ಠ ಶೇಕಡವಾರು ಅಂಕಗಳನ್ನು ಪಡೆದಿರುವಂತಹ ಅಭ್ಯರ್ಥಿಗಳು ಮಾತ್ರ ಮೇಲೆ ತಿಳಿಸಿರುವ ಹುದ್ದೆಗಳಿಗೆ ಅರ್ಜಿಯನ್ನು ಸಲ್ಲಿಸಲು ಅರ್ಹರಾಗಿರುತ್ತಾರೆ.

| ಕ್ರ . ಸಂ. | ಪ್ರವರ್ಗ | ಶೇಕಡಾವಾರು |
|---|---|---|
| 1. | ಸಾಮಾನ್ಯ ಅರ್ಹತೆಗೆ ಸೇರಿದ ಅಭ್ಯರ್ಥಿಗಳು | 60% |
| 2. | ಪ್ರವರ್ಗ IIA, IIB, IIIA ಮತ್ತು IIIB ಗೆ ಸೇರಿದ ಅಭ್ಯರ್ಥಿಗಳು | 50% |
| 3. | ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ–I ಕ್ಕೆ ಸೇರಿದ ಅಭ್ಯರ್ಥಿಗಳು | ತೇರ್ಗಡೆ |

ಈ) **ಆಯ್ಕೆ:**

**i)** ಮೇಲಿನ ಹುದ್ದೆಗಳಿಗೆ ಆಯ್ಕೆಯನ್ನು ಅರ್ಹತಾದಾಯಕ ವಿದ್ಯಾರ್ಹತೆಯಲ್ಲಿ ಗಳಿಸಿರುವ ಶೇಕಡಾವಾರು ಅಂಕಗಳ ಶ್ರೇಷ್ಠತೆ ಆಧಾರದ ಮಾಡಲಾಗುವುದು

**ii)** ಕರ್ನಾಟಕ ಸರ್ಕಾರದಲ್ಲಿ ಚಾಲ್ತಿಯಲ್ಲಿರುವ ಮೀಸಲಾತಿ ನಿಯಮಗಳನ್ನು ಪಾಲಿಸಿ ಆಯ್ಕೆ ಮಾಡಲಾಗುವುದು

**iii)** ವಿವಿಧ ಜಾತಿ/ವರ್ಗ/ಪ್ರವರ್ಗಗಳಿಗೆ ಸೇರಿದ ಅಭ್ಯರ್ಥಿಗಳನ್ನು ಅರ್ಹತೆ ಆಧಾರದ ಮೇಲೆ 1:5 ರ ಅನುಪಾತದಲ್ಲಿ ಸಹನಾ ಶಕ್ತಿಯ ಪರೀಕ್ಷೆಗೆ ಕರೆಯಲಾಗುವುದು.

**iv)** ಸಹನ ಶಕ್ತಿ ಪರೀಕ್ಷೆಯ ಸಮಯದಲ್ಲಿ ಸಕ್ಷಮ ವೈದ್ಯಕೀಯ ಪ್ರಾಧಿಕಾರಿಗಳಿಂದ ಅಭ್ಯರ್ಥಿಗಳ ವೈದ್ಯಕೀಯ ತಪಾಸಣೆಯನ್ನು ನಡೆಸಲಾಗುತ್ತದೆ. ಸದರಿ ವೈದ್ಯಕೀಯ ತಪಾಸನೆ ಸಮಯದಲ್ಲಿ ಅಭ್ಯರ್ಥಿಗಳು ತೃಪ್ತಿಕರ ದೇಹದಾರ್ಢ್ಯವನ್ನು ಹೊಂದಿರಬೇಕು.

**v)** ಸಹನ ಶಕ್ತಿಯ ಪರೀಕ್ಷೆಗೆ ಈ ಕೆಳಗಿನ ಸ್ಪರ್ಧೆಗಳನ್ನು ನಿಗದಿಪಡಿಸಲಾಗಿದೆ.

| | | |
|---|---|---|
| **a)** | 100 ಮೀಟರ್ ಓಟ | – 14 ಸೆಕೆಂಡ್‌ಗಳು |
| **b)** | ಸ್ಕಿಪಿಂಗ್ | – ಒಂದು ನಿಮಿಷದಲ್ಲಿ 50 ಬಾರಿ |
| **c)** | ಶಾಟ್ ಪುಟ್ 12 ಪೌಂಡ್‌ಗಳು | – 8 ಮೀಟರ್ ಎಸೆತ (3 ಅವಕಾಶಗಳು) |
| **d)** | ವಿದ್ಯುತ್ ಕಂಬ ಹತ್ತುವುದು | – 8 ಮೀಟರ್ ಎತ್ತರ (ಕಡ್ಡಾಯ) |
| **e)** | 800 ಮೀಟರ್ ಓಟ | – 3 ನಿಮಿಷಗಳು |

**vi)** ಸಹನ ಶಕ್ತಿಯ ಪರೀಕ್ಷೆಯ ಸ್ಪರ್ಧೆಗಳಿಗೆ ಯಾವುದೇ ಅಂಕಗಳನ್ನು ನಿಗದಿಪಡಿಸಿರುವುದಿಲ್ಲ. ಅಭ್ಯರ್ಥಿಗಳು ಆಯ್ಕೆಗೆ ಅರ್ಹರಾಗಲು ಕಡ್ಡಾಯವಾಗಿ ವಿದ್ಯುತ್ ಕಂಬವನ್ನು ಹತ್ತುವುದು (ಸ್ಪರ್ಧೆ ಸಂಖ್ಯೆ: ಡಿ) ಮತ್ತು ಇನ್ನುಳಿದ ಕನಿಷ್ಠ ಎರಡು ಸ್ಪರ್ಧೆಗಳಲ್ಲಿ ಅರ್ಹತೆಯನ್ನು ಹೊಂದಬೇಕಿರುತ್ತದೆ (ಸ್ಪರ್ಧೆ ಸಂಖ್ಯೆ : ಎ., ಬಿ., ಮತ್ತು ಇ).

**vi)** ಸಹನ ಶಕ್ತಿ ಪರೀಕ್ಷೆ ಹಾಗೂ ಮೂಲ ದಾಖಲಾತಿಗಳು/ಪ್ರಮಾಣ ಪತ್ರಗಳ ಇತರೆ ಮೂಲ ದಾಖಲಾತಿಗಳ ಪರಿಶೀಲನೆಯನ್ನು ಬೆಸ್ಕಾಂನ ವ್ಯಾಪ್ತಿಯ ವೃತ್ತ/ವಿಭಾಗ ಕೇಂದ್ರಗಳಲ್ಲಿ ನಡೆಸಲಾಗುವುದು.

vii) ಪತ್ರಿಕಾ ಪ್ರಕಟಣೆ/ವೆಬ್‌ಸೈಟ್ ಮೂಲಕ ಸಹನಶಕ್ತಿ ಪರೀಕ್ಷೆಯ ಸ್ಥಳ ದಿನಾಂಕವನ್ನು ಅರ್ಹ ಅಭ್ಯರ್ಥಿಗಳಿಗೆ(Shortlisted candidates)ತಿಳಿಸಲಾಗುವುದು. ಮೊಬೈಲ್ ಸಂಖ್ಯೆ ಕೊಟ್ಟಂತಹ ಅಭ್ಯರ್ಥಿಗಳಿಗೆ ಎಸ್.ಎಂ.ಎಸ್ ಮುಖಾಂತರ ತಿಳಿಸಲಾಗುವುದು.

ix) ಸಹನಾ ಶಕ್ತಿಯ ಪರೀಕ್ಷೆಗೆ ಆಯ್ಕೆಯಾಗುವ ಅಭ್ಯರ್ಥಿಗಳ ಮೂಲ ದಾಖಲಾತಿಗಳು/ಪ್ರಮಾಣ ಪತ್ರಗಳ ಇತರೆ ಮೂಲ ದಾಖಲಾತಿಗಳ ಪರಿಶೀಲನೆಯನ್ನು ಸಹನ ಶಕ್ತಿ ಪರೀಕ್ಷೆಯ ಸಂದರ್ಭದಲ್ಲಿ ಮಾಡಲಾಗುವುದು. ಸಹನ ಶಕ್ತಿ ಪರೀಕ್ಷೆಯ ಸಮಯಕ್ಕೆ ಮೂಲ ದಾಖಲಾತಿಗಳು/ ಪ್ರಮಾಣ ಪತ್ರಗಳ ಇತರೆ ಮೂಲ ದಾಖಲಾತಿಗಳ 'ದೃಢೀಕೃತ ಪ್ರತಿ' ಗಳನ್ನು ಸಲ್ಲಿಸುವುದು.

ಊ) <u>ವಯೋಮಿತಿ:</u>

ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕದಂದು ಕನಿಷ್ಠ 18 ವರ್ಷ ತುಂಬಿದವರಾಗಿರಬೇಕು ಹಾಗೂ ಈ ಕೆಳಕಂಡ ಗರಿಷ್ಠ ವಯೋಮಿತಿಯನ್ನು ಮೀರಿರಬಾರದು.

i) ಸಾಮಾನ್ಯ ಅರ್ಹತೆಗೆ ಸೇರಿದ ಅಭ್ಯರ್ಥಿಗಳು – 35 ವರ್ಷಗಳು

ii) ಪ್ರವರ್ಗ IIA, IIB, IIIA, IIIB ಗೆ ಸೇರಿದ ಅಭ್ಯರ್ಥಿಗಳಿಗೆ – 38 ವರ್ಷಗಳು

iii) ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡ ಮತ್ತು ಪ್ರವರ್ಗ – I ಕ್ಕೆ ಸೇರಿದ ಅಭ್ಯರ್ಥಿಗಳು – 40 ವರ್ಷಗಳು

<u>ಟಿಪ್ಪಣಿ:-</u>

a) ಮಾಜಿ ಸೈನಿಕರಿಗೆ ಅವರು ಸಶಸ್ತ್ರ ಪಡೆಯಲ್ಲಿ ಸೇವೆ ಸಲ್ಲಿಸಿರುವ ಅವಧಿಗೆ ಮೂರು ವರ್ಷಗಳಷ್ಟು ಸೇರಿಸಿ, ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕದಂದು ಗರಿಷ್ಠ 45 ವರ್ಷಗಳವರೆಗೆ ವಯೋಮಿತಿಯಲ್ಲಿ ಸಡಿಲಿಕೆಯನ್ನು ನೀಡಲಾಗುವುದು.

b) ಕವಿಪ್ರನಿನಿ/ಎಸ್ಕಾಂಗಳಲ್ಲಿ ಈಗಾಗಲೇ ಖಾಯಂ ಸೇವೆಯಲ್ಲಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದರೆ ಅಂತಹ ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿಯಲ್ಲಿ, ಅವರು ಕವಿಪ್ರನಿನಿ/ ಎಸ್ಕಾಂಗಳಲ್ಲಿ ಸೇವೆ ಸಲ್ಲಿಸಿರುವ ಅವಧಿಯಷ್ಟು, ಗರಿಷ್ಠ ಏಳು ವರ್ಷಗಳ ಮಿತಿಗೊಳಪಟ್ಟು ಸಡಿಲಿಕೆಯನ್ನು ನೀಡಲಾಗುವುದು.

c) ಕವಿಪ್ರನಿನಿ/ಎಸ್ಕಾಂಗಳಲ್ಲಿ, ಗ್ಯಾಂಗ್‌ಮನ್/ಬಿಲ್ ಬಾಯ್ಸ್/ಪ್ರೊಬೇಷನರಿ ಮಜ್ದೂರ್/ತಾತ್ಕಾಲಿಕ ಶುಚಿಗಾರರು/ಸ್ಯಾನಿಟರಿ ವರ್ಕರ್ ಮತ್ತು ತಾತ್ಕಾಲಿಕ ಮಾಪಕ ಓದುಗರಾಗಿ ಗುತ್ತಿಗೆ ಆಧಾರದಲ್ಲಿ ಸೇವೆ ಸಲ್ಲಿಸಿರುವ/ ಸೇವೆ ಸಲ್ಲಿಸುತ್ತಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದರೆ, ಅಂತಹ ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿಯಲ್ಲಿ ಅವರು ಕವಿಪ್ರನಿನಿ/ ಎಸ್ಕಾಂಗಳಲ್ಲಿ ಸೇವೆ ಸಲ್ಲಿಸಿರುವ ಅವಧಿಯಷ್ಟು, ಗರಿಷ್ಠ 10 ವರ್ಷಗಳ ಮಿತಿಗೊಳಪಟ್ಟು ಸಡಿಲಿಕೆಯನ್ನು ನೀಡಲಾಗುವುದು. ಸದರಿ ವಯೋಮಿತಿಯ ರಿಯಾಯಿತಿಯನ್ನು ಪಡೆಯಲು ಸಂಬಂಧಿಸಿದ ಕವಿಪ್ರನಿನಿ/ಎಸ್ಕಾಂ ಕಛೇರಿಯಿಂದ ದೃಢೀಕರಣ ಪಡೆಯುವುದು.

ಎ) **<u>ಅರ್ಜಿ ಶುಲ್ಕ:</u>**

1) ಸಾಮಾನ್ಯ ಅರ್ಹತೆ ಮತ್ತು ಪ್ರವರ್ಗ I, IIA, IIB, IIIA, IIIB ಗೆ ಸೇರಿದ ಅಭ್ಯರ್ಥಿಗಳಿಗೆ– ರೂ 400/– (ನಾಲ್ಕು ನೂರು ರೂಪಾಯಿಗಳು ಮಾತ್ರ).

1) ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳಿಗೆ– ರೂ 200/– (ಎರಡು ನೂರು ರೂಪಾಯಿಗಳು ಮಾತ್ರ).

2) ಅರ್ಜಿಯ ಶುಲ್ಕವನ್ನು ನೆಟ್ ಬ್ಯಾಂಕಿಂಗ್, ಯಾವುದೇ ಬ್ಯಾಂಕಿನ ಎಟಿಎಂ ಡೆಬಿಟ್ ಕಾರ್ಡ್, ಇಂಟರ್‌ನೆಟ್ ಬ್ಯಾಂಕಿಂಗ್ ಮೂಲಕ ಪಾವತಿಸಬಹುದಾಗಿದೆ.

**ಅಥವಾ**

'ಬ್ಯಾಂಕ್ ಚಲನ್' ಮೂಲಕ ನಿಗಧಿತ ಅರ್ಜಿ ಶುಲ್ಕವನ್ನು, ಬ್ಯಾಂಕ್ ಚಾರ್ಜಸ್ ಜೊತೆಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಯಲ್ಲಿ ಪಾವತಿಸುವುದು.

ಏ) **ಅರ್ಜಿ ಸಲ್ಲಿಸುವ ವಿಧಾನ:**

a) ಅರ್ಜಿಯನ್ನು ಕಡ್ಡಾಯವಾಗಿ ಬೆವಿಕಂ ವೆಬ್‌ಸೈಟ್ www.bescom.org ಮೂಲಕ, "ಆನ್ ಲೈನ್" ನಲ್ಲಿ ಮೂಲಕ ಸಲ್ಲಿಸಬೇಕು. ಇತರೇ ಯಾವುದೇ ವಿಧಾನದಲ್ಲಿ ಸಲ್ಲಿಸುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

b) "ಆನ್ ಲೈನ್" ಅರ್ಜಿ ಸಲ್ಲಿಸಲು ವೆಬ್‌ಸೈಟ್ ಸೌಲಭ್ಯವನ್ನು ದಿನಾಂಕ: 22/09/2014 ರಿಂದ 23/10/2014 ವರೆಗೆ ಅವಕಾಶವಿರುತ್ತದೆ.

c) ಅಭ್ಯರ್ಥಿಗಳು ಒಂದು ಬಾರಿ ಮಾತ್ರ ಅರ್ಜಿಯನ್ನು ಸಲ್ಲಿಸಬೇಕು ಹಾಗೂ ಒಮ್ಮೆ ಸಲ್ಲಿಸಿದ ಸರ್ಜಿಯನ್ನು ಯಾವುದೇ ಕಾರಣಕ್ಕೂ ತಿದ್ದುಪಡಿಗೆ ಅವಕಾಶವಿರುವುದಿಲ್ಲ.

d) ಒಂದು ವೇಳೆ ಅರ್ಜಿ ಸಲ್ಲಿಸಿ, ಶುಲ್ಕ ಪಾವತಿಸದಿದ್ದಲ್ಲಿ, ಅಂತಹ ಅರ್ಜಿಗಳನ್ನು ಪರಿಗಣಿಸಲಾಗುದಿಲ್ಲ.

e) ದಿನಾಂಕ: 22/09/2014 ರಿಂದ ದಿನಾಂಕ: 23/10/2014 ರ ವರೆಗೆ ಬ್ಯಾಂಕಿನ ವ್ಯವಹಾರದ ವೇಳೆಯಲ್ಲಿ "ಆನ್ ಲೈನ್" ನಲ್ಲಿ ಲಭ್ಯವಿರುವ 'ಬ್ಯಾಂಕ್ ಚಲನ್' ಮೂಲಕ ಅರ್ಜಿ ಶುಲ್ಕವನ್ನು ಪಾವತಿಸುವ ಅರ್ಹ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುತ್ತದೆ.

f) ಅರ್ಜಿ ಶುಲ್ಕವನ್ನು ದಿನಾಂಕ:– 22/09/2014 ರಿಂದ ದಿನಾಂಕ: 23/10/2014 ರ ವರೆಗೆ ಬ್ಯಾಂಕಿನ ವ್ಯವಹಾರದ ವೇಳೆಯನ್ನು ಹೊರತು ಪಡಿಸಿ, ನಿಗದಿತ ಅವಧಿಯ ನಂತರ ಪಾವತಿಸಿದ ಅರ್ಜಿ ಶುಲ್ಕವನ್ನು ಯಾವುದೇ ಸಂದರ್ಭದಲ್ಲಿ ಹಿಂದಿರುಗಿಸಲಾಗುವುದಿಲ್ಲ ಅಥವಾ ಅದನ್ನು ಯಾವುದೇ ನೇಮಕಾತಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ.

g) ಒಮ್ಮೆ ಅರ್ಜಿ ಶುಲ್ಕವನ್ನು ಪಾವತಿಸಿದ ನಂತರ, ಅದನ್ನು ಯಾವುದೇ ಸಂದರ್ಭದಲ್ಲಿ ಹಿಂದಿರುಗಿಸಲಾಗುವುದಿಲ್ಲ ಅಥವಾ ಅದನ್ನು ಯಾವುದೇ ನೇಮಕಾತಿಗಳಿಗೆ ಹೊಂದಾಣಿಕೆ ಮಾಡಲಾಗುವುದಿಲ್ಲ.

h) "ಆನ್‌ಲೈನ್" ಅರ್ಜಿಗಳನ್ನು ಭರ್ತಿ ಮಾಡಿದ ನಂತರ ಅಭ್ಯರ್ಥಿಗಳು 'ಸ್ವೀಕೃತಿ ಪತ್ರ' ಮತ್ತು 'ಬ್ಯಾಂಕ್ ಚಲನ್' ಪ್ರತಿಗಳ ಮುದ್ರಿತ (print out) ಪ್ರತಿ ತೆಗೆದುಕೊಳ್ಳತಕ್ಕದ್ದು.

i) ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದವರೆಗೆ ವಿಳಂಬ ಮಾಡದೇ ಮುಂಚಿತವಾಗಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು.

ಐ) **ಸಾಮಾನ್ಯ ಸೂಚನೆಗಳು:**

a) ಭಾರತೀಯ ನಾಗರೀಕರು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

b) ಅಭ್ಯರ್ಥಿಯು ಅಪರಾಧಿಯೆಂದು ಘೋಷಿಸಲ್ಪಟ್ಟಿದ್ದರೆ ಅಥವಾ ಕೇಂದ್ರ ಲೋಕ ಸೇವಾ/ರಾಜ್ಯ ಲೋಕ ಸೇವಾ ಆಯೋಗದಿಂದ ಯಾವುದೇ ಪರೀಕ್ಷೆಯನ್ನು ಬರೆಯಲು ಅಥವಾ ಯಾವುದೇ ಹುದ್ದೆಗೆ ಆಯ್ಕೆಯಾಗಲು ತಾತ್ಕಾಲಿಕವಾಗಿ ಖಾಯಂ ಆಗಿ ತಡೆಹಿಡಿಯಲ್ಪಟ್ಟಿದ್ದರೆ ಅಂತಹವರನ್ನು ನೇಮಕಾತಿಗೆ ಪರಿಗಣಿಸಲಾಗುವುದಿಲ್ಲ. ಆದಾಗ್ಯೂ ಕಂಪನಿಯು ಅಂತಹ ಪ್ರಕರಣವನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ, ಅಂತಹ ಅಭ್ಯರ್ಥಿಯು ಅರ್ಹನೆಂದು ತೀರ್ಮಾನಿಸಿದ್ದಲ್ಲಿ ಮಾತ್ರ ನೇಮಕಾತಿಗೆ ಅರ್ಹನಾಗಿರುತ್ತಾನೆ.

c) ಅರ್ಜಿಯಲ್ಲಿ ಸುಳ್ಳು ಮಾಹಿತಿಯನ್ನು ಒದಗಿಸಿ, ಉದ್ಯೋಗ ಪಡೆದ ಅಭ್ಯರ್ಥಿಗಳನ್ನು ಸೇವೆಯಿಂದ ವಜಾಗೊಳಿಸಲಾಗುವುದು.

d) ಅರ್ಜಿಯಲ್ಲಿ ನೀಡುವ ಅಂಚೆ ವಿಳಾಸವು ಅಂತಿಮವಾಗಿದ್ದು, ಪತ್ರ ವ್ಯವಹಾರವನ್ನು ಅದೇ ವಿಳಾಸದೊಂದಿಗೆ ನಡೆಸಲಾಗುವುದು. ವಿಳಾಸ ಬದಲಾವಣೆಗೆ ಸಂಬಂಧಿಸಿದಂತೆ ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ.

e) ಅವಶ್ಯಕ ವಿದ್ಯಾರ್ಹತೆಯ ಪರೀಕ್ಷೆಗೆ ಕುಳಿತಿದ್ದು, ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದಂದು ಪರೀಕ್ಷಾ ಫಲಿತಾಂಶ ಪ್ರಕಟವಾಗದಿರುವಂತಹ, ಅಭ್ಯರ್ಥಿಗಳು ಅರ್ಜಿಗಳನ್ನು ಸಲ್ಲಿಸತಕ್ಕದ್ದಲ್ಲ.

f) ಅರ್ಜಿಗಳನ್ನು 'ಆನ್‌ಲೈನ್'ದಲ್ಲಿ ಭರ್ತಿ ಮಾಡುವ ಪೂರ್ವದಲ್ಲಿ, ಅರ್ಹ ಅಭ್ಯರ್ಥಿಗಳು ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಸೂಚನೆಗಳನ್ನು ಗಮನಿಸತಕ್ಕದ್ದು.

g) ಅಭ್ಯರ್ಥಿಗಳು ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡ, ಪ್ರವರ್ಗ I, IIA, IIB, IIIA ಮತ್ತು IIIB ಯಲ್ಲಿನ ಮೀಸಲಾತಿಗೆ ಹಾಗೂ ಸಮತಳ ಮೀಸಲಾತಿಗೆ ಸಂಬಂಧಿಸಿದಂತೆ, ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕದಂದು ಕರ್ನಾಟಕ ಸರ್ಕಾರದಲ್ಲಿ ಚಾಲ್ತಿಯಲ್ಲಿರುವ ವಿವಿಧ ಆದೇಶಗಳಲ್ಲಿನ ಮಾನ ದಂಡವನ್ನು ತಿಳಿದಿರತಕ್ಕದ್ದು.

h) ಅಭ್ಯರ್ಥಿಗಳ ಅರ್ಹತೆ ಕುರಿತು ಕಂಪನಿಯ ತೀರ್ಮಾನವೇ ಅಂತಿಮವಾಗಿದ್ದು, ಅಭ್ಯರ್ಥಿಗಳು ಇದಕ್ಕೆ ಬದ್ಧರಾಗಿರತಕ್ಕದ್ದು.

i) ನೇಮಕಾತಿಗಾಗಿ ಯಾವುದೇ ವಿಧದ ಪ್ರಭಾವ ಬೀರಲು ಅಭ್ಯರ್ಥಿ ನಡೆಸುವ ಪ್ರಯತ್ನವು, ಅಭ್ಯರ್ಥಿಯನ್ನು ಅನರ್ಹಗೊಳಿಸುವುದು.

j) ಅಭ್ಯರ್ಥಿಗಳು ಮೂಲ ದಾಖಲಾತಿಗಳು/ ಪ್ರಮಾಣ ಪತ್ರಗಳ ಇತರೆ ಮೂಲ ದಾಖಲಾತಿಗಳನ್ನು ಸಲ್ಲಿಸಲು ಕರೆ ನೀಡಿದಾಗ, ಪರಿಶೀಲನೆಗಾಗಿ 'ದೃಢೀಕೃತ ಪ್ರತಿ' ಗಳೊಂದಿಗೆ ಹಾಜರುಪಡಿಸತಕ್ಕದ್ದು.

k) ಕಂಪನಿಯು ಯಾವುದೇ ಹಂತದಲ್ಲಾದರೂ ನೇಮಕಾತಿ ಪ್ರಕ್ರಿಯೆಯನ್ನು ರದ್ದುಗೊಳಿಸುವ ಹಾಗೂ ಅಗತ್ಯವಿದ್ದಲ್ಲಿ, ಹೊಸದಾಗಿ/ತಿದ್ದುಪಡಿ ಪ್ರಕಟಣೆ ನೀಡುವ ಹಕ್ಕನ್ನು ಕಾಯ್ದಿರಿಸಿದೆ.

l) ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿರುವಾಗ ನೇಮಕಾತಿ ವಿಷಯಗಳಿಗೆ ಸಂಬಂಧಿಸಿದಂತೆ ಯಾವುದೇ ಪತ್ರ ವ್ಯವಹಾರ ಅಥವಾ ವಿಚಾರಣೆಗಳಿಗೆ ಅವಕಾಶವಿರುವುದಿಲ್ಲ.

m) ಅಭ್ಯರ್ಥಿಗಳು ಯಾವುದೇ ಪ್ರವರ್ಗದಡಿಯಲ್ಲಿ ಅರ್ಜಿ ಸಲ್ಲಿಸಿ ಸಾಮಾನ್ಯ ವರ್ಗದಡಿಯಲ್ಲಿ ಅಯ್ಕೆಯಾಗುವಂತಹ ಅಭ್ಯರ್ಥಿಗಳು ಸಂಬಂಧಿಸಿ ಸಕ್ಷಮ ಪ್ರಾಧಿಕಾರದಿಂದ ಸಿಂಧುತ್ವ ಪ್ರಮಾಣ ಪತ್ರ ಹಾಜರುಪಡಿಸಿದ ನಂತರವೇ ನೇಮಕಾತಿ ಆದೇಶ ಹೊರಡಿಸಲಾಗುವುದು.

n) **GOK vide Order no. EN/115/EEB/2010 (part-II) dated: 25.01.2012 has granted exemption from providing reservation to persons with disabilities as per section 32 of The Persons with Disabilities (Equal Opportunities, Protection of Rights and Full Participation) Act, 1995.**

o) **GOK in its Order No: EN 193 EEB 2012 dated 19.01.2013 has granted exemption from extending 30% reservation quota earmarked for women category in direct recruitment of Assistant Lineman.**

p) ನೇಮಕಾತಿ ಪ್ರಕ್ರಿಯೆಯ ವಿವಿಧ ಹಂತಗಳ ಮಾಹಿತಿಯು ಬೆವಿಕಂ ವೆಬ್‌ಸೈಟ್ www.bescom.org ನಲ್ಲಿ ಲಭ್ಯಗೊಳಿಸಲಾಗುವುದು.

ಒ) **ಸಮತಳ ಮೀಸಲಾತಿ:**

| | | |
|---|---|---|
| i | ಗ್ರಾಮೀಣ ಅಭ್ಯರ್ಥಿ | ಗ್ರಾಮೀಣ ಮೀಸಲಾತಿ ಪಡೆಯ ಬಯಸುವ ಅಭ್ಯರ್ಥಿಗಳು, ಸರ್ಕಾರವು ತನ್ನ ಆದೇಶ ಸಂಖ್ಯೆ: DPAR 96 SRR 2005, ದಿನಾಂಕದ: 10.08.2005 ರಲ್ಲಿ ಸೂಚಿಸಿರುವ..ಗ್ರಾಮೀಣ ಪ್ರದೇಶಗಳಲ್ಲಿ ಒಂದನೇ ತರಗತಿಯಿಂದ, ಹತ್ತನೇ ತರಗತಿವರೆಗೆ ನಿರಂತರವಾಗಿ ವ್ಯಾಸಂಗ ಮಾಡಿರಬೇಕು. ಗ್ರಾಮೀಣ ಪ್ರದೇಶಗಳಲ್ಲಿ ವ್ಯಾಸಂಗ ಮಾಡಿರುವುದನ್ನು ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರು ನಿಗಧಿತ ನಮೂನೆಯಲ್ಲಿ ದೃಢೀಕರಿಸಿರಬೇಕು ಮತ್ತು ಇದಕ್ಕೆ ಕ್ಷೇತ್ರ ಶಿಕ್ಷಣಾಧಿಕಾರಿ/ ಜಿಲ್ಲಾ ಶಿಕ್ಷಣಾಧಿಕಾರಿ 'ಮೇಲು ಸಹಿ' ಮಾಡಿರಬೇಕು. |
| ii | ಮಾಜಿ ಸೈನಿಕರು | ಸೇನೆಯಿಂದ ಬಿಡುಗಡೆ ಹೊಂದಿರುವುದಕ್ಕೆ ಪ್ರಮಾಣ ಪತ್ರ ಹೊಂದಿರಬೇಕು. |
| iii | ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ | ಕನ್ನಡ ಮಾಧ್ಯಮದಲ್ಲಿ ನಿರಂತರವಾಗಿ ಒಂದನೇ ತರಗತಿಯಿಂದ, ಹತ್ತನೇ ತರಗತಿವರೆಗೆ ವ್ಯಾಸಂಗ ಮಾಡಿರುವದನ್ನು ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರು ನಿಗಧಿತ ನಮೂನೆಯಲ್ಲಿ ದೃಢೀಕರಿಸಿರಬೇಕು ಮತ್ತು ಇದಕ್ಕೆ ಕ್ಷೇತ್ರ ಶಿಕ್ಷಣಾಧಿಕಾರಿ/ ಜಿಲ್ಲಾ ಶಿಕ್ಷಣಾಧಿಕಾರಿ 'ಮೇಲು ಸಹಿ' ಮಾಡಿರಬೇಕು. |
| iv | ಯೋಜನೆಗಳಿಂದ ನಿರಾಶ್ರಿತಗೊಂಡ ಅಭ್ಯರ್ಥಿ | ಯೋಜನೆಗಳಿಗಾಗಿ ಮನೆ/ಜಮೀನುಗಳನ್ನು ಕಳೆದುಕೊಂಡಿರುವುದಕ್ಕೆ ಮನೆ/ಜಮೀನುಗಳನ್ನು ವಶಪಡಿಸಿಕೊಂಡ ಸಂಬಂಧಪಟ್ಟ ಸಕ್ಷಮ ಸರ್ಕಾರಿ ಪ್ರಾಧಿಕಾರಿಯಿಂದ, ನೀಡಲ್ಪಟ್ಟ 'ಯೋಜನಾ ನಿರಾಶ್ರಿತ ಪ್ರಮಾಣ ಪತ್ರ' ಗಳನ್ನು ಹೊಂದಿರಬೇಕು. |

ಓ) <u>ಮಾರ್ಗದಾಳು ಹುದ್ದೆಯ ಕೆಲಸ ಮತ್ತು ಜವಾಬ್ದಾರಿಗಳು–</u>

ಅ) ವಿದ್ಯುತ್ ಕಂಬಗಳ ನೆಡುವಿಕೆ, ಗುಂಡಿಗಳ ಅಗೆಯುವಿಕೆ, ಕಂಬಗಳ ಮತ್ತು ಪೂರಕ ಸಾಮಾಗ್ರಿಗಳನ್ನು ಹೊರುವುದು, ಮಾರ್ಗಗಳ ತಪಾಸಣೆ, ಬೀದಿ ದೀಪಗಳ ಆನ್ & ಆಫ್, ಬೀದಿ ದೀಪಗಳ ಬದಲಾವಣೆ, ಮಾರ್ಗಗಳ ನಿರ್ವಹಣೆಗಾಗಿ ಕಂಬಗಳನ್ನು ಹತ್ತಿ ಕಾರ್ಯನಿರ್ವಹಿಸುವುದು, ಮಾರ್ಗದಾಳು/ ಮಾರ್ಗಕರ್ಮಿರವರುಗಳು ನಿರ್ವಹಿಸುವ ಮಾರ್ಗಗಳ ನಿರ್ವಹಣೆ ಕಾರ್ಯದಲ್ಲಿ ಸಹಾಯ ಮಡುವುದು, ಫ್ಯೂಸ್ ಆಫ್ ಕಾಲ್ ಮತ್ತು ದೋಷಗಳನ್ನು ಕಂಡುಹಿಡಿದು ಸರಿಪಡಿಸುವುದು, ಕ್ಯಾಂಪ್‌ಗಳಲ್ಲಿ ಕಾರ್ಯನಿರ್ವಹಿಸುವುದು ಹಾಗು ಪೂರಕ ದಾಖಲೆಗಳನ್ನು ನಿರ್ವಹಿಸುವುದು ಅಲ್ಲದೇ ಶಾಖೆಯ ಮುಖ್ಯಸ್ಥರು ಕಂಪನಿಯ ಹಿತದೃಷ್ಟಯಿಂದ ವಹಿಸುವ ಯಾವುದೇ ಕೆಲಸಗಳನ್ನು ನಿರ್ವಹಿಸುವುದು.

ಆ) ಅಗತ್ಯ ಇರುವ ಸ್ಥಳಗಳಲ್ಲಿ ಪಾಳಿ ಆಧಾರದಲ್ಲಿ ಕಾರ್ಯನಿರ್ವಹಿಸುವುದು.

**ಪ್ರಧಾನ ವ್ಯವಸ್ಥಾಪಕರು(ಆ&ಮಾಸಂ)**
**ಬೆವಿಕಂ**